ಗಳನ್ನು ಜಮಾಯಿತಿ ಚಿಕ್ಕಮಗಳೂರು ಕೋರ್ಟಿಗೆ ಭಂಡೀಪೇಲೆ ನಾಗಿಸುವ ಮೇಲೆಕಂಡ ಕಂಟ್ರಾಕ್ಟು, ಚಿಕ್ಕಮಗಳೂರು ಮೊಕ್ಕಾಂ ನಲ್ಲಿ ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟು ಅಂಥಾ ಆಫೀಸರರಿಂದ ಮಾಹೆ ಮಜಕೂರು 15ನೇ ಮುಕ್ತಂ ನಲ್ಲಿ ಬಹಿರಂಗವಾದ ಹರಾಜ್ ಮೂಲಕ ಪುನಹಾ ವಿಕ್ರಯಿಸಲ್ಪಡುತ್ತೆ.

2. ಹರಾಜಿನ ಷರತ್ತುಗಳು, ಹರಾಜು ಪುರುವಾಗುವದಕ್ಕೆ ಮುಂಚಿತವಾಗಿ ಓದಲ್ಪಡುವದು.

ಮಹಮ್ಮದಲ್ಲಿ, ಖಾ, ಬ,
ಅಫೀಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 10ನೇ ಡಿಸಂಬರ್ 1884.

"50 ರೂಪಾಯಿ ಇನಾಂ."

ಸ್ಯ 1884ನೇ ಇಸವಿ ನವಂಬರ್ 14ನೇ ಮುಕ್ತಂ ಯಾ ೧೫ ಸುಮಾರಿನಲ್ಲಿ ಬೆಂಗಳೂರು ಷಹರ್ ಸುಲರ್ತಾ ಪೇಟೆಯಲ್ಲಿ ಇರುವ ಮೆ|| ಮುದ್ದಪ್ಪನವರ ಮನೆಯಲ್ಲಿ ಹಾಸಿ ಮತ್ತು ಟಿಲ್ಸ್‌ಯವರಿಂದ ತಯಾರ್ಮಾಡಲ್ಪಟ್ಟ 23857ನೇ ನಂಬರುಳ್ಳ ಭಂಗಾರದ ಕ್ರಾನಾಮಿಟರ್ ವಾಚ್ ಯಾನೇ ಘಡಿಯಾರ ಮತ್ತು 9 ತೊಲೆ ತೂಕವುಳ್ಳ ಅದರ ಭಂಗಾರದ ಸರಪಣಿ ಸಹಾ ಚೋರಿಯಾಗಿರುವ ಸಬಬ್ ಅವುಗಳು ಪತ್ತೆ ಆಗುವಂತೆ ವರ್ತಮಾನ ಕೊಡುವ ಮತ್ತು ಅವುಗಳನ್ನು ಪತ್ತೇಮಾಡಿಕೊಡುವ ಮನುಷ್ಯ ಯಾ ಮನುಷ್ಯರಿಗೆ ಸದರೀ ಮುದ್ದಪ್ಪನವರಿಂದ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಕೃಷ್ಣಯ್ಯಂಗಾರ್, ಫಾರ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಇಸವಿ ಫೆಬ್ರವರಿ ಗುರ್ವೇ ತಾರೀಖು ಲಾಗಾಯಿತು ಜೂನ್ 30ನೆ|| ತಾರೀಖುವರಿಗೆ ಇದರಡಿ ಕಂಡ ಪ್ಲಾಂಟೇಷ್ಣಗಳು ಬೇಟೆಗೆ ಕಾಲಕ್ಕೊತ್ತಕ್ಕ ಮುಚ್ಚಲ್ಪಡುತವೆ. ಬೇಟೆಗಾರರು ಪ್ಲಾಂಟೇಷ್ಣಗಳ ಚಾರ್ಜ್‌ನಲ್ಲಿರುವ ಫಾರೆಸ್ಟ್ಸ್ ಅಸ್ಸೆಂಟಿಸ್‌ಯವರ ವಿಶೇಷ ಅಪ್ಪಣೆಯಿವಾಯಿ ಸದರೀ ಪ್ಲಾಂಟೇಷ್ಣಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ.

ಪ್ಲಾಂಟೇಷ್ಣಗಳು.		ತಾಲ್ಲೂಕು.
ಕಾಡಗೋಡಿ		ಹೊಸಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A. B. ಮ C.)	ಡಿಟೋ
ತಟ್ನೂರು		ಡಿಟೋ
ತಿಂಡಲ್		ಹೊಸಕೋಟೆ ಮತ್ತು ಮಾಲೂರು
ಅಪ್ಪಸಂದ್ರ		ಡಿಟೋ
ದೊಡ್ಡಹರಡಿ		ಹೊಸಕೋಟೆ ಮತ್ತು ಚಿಲ್ಲಘಟ್ಟ
ಚಿಕ್ಕಹರಡಿ		ಡಿಟೋ
ರಾಮಚಂದ್ರಾಪುರ		ಮಾಲೂರು
ಮಾರಸಂದ್ರ		ಡಿಟೋ
ಕುರಂಡಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ಜಂಗಮಕೋಟೆ		ಚಿಲ್ಲಘಟ್ಟ
ಈಸೂರು		ಬೆಂಗಳೂರು

ಯಸ್. ವಿ. ಬಾಪೂರಾವ್,
ಫಾರೆಸ್ಟ್ಸ್ ಅಸ್ಸೆಂಟಿಸ್ ಇನ್ ಚಾರ್ಜ್ ಪ್ಲಾಂಟೇಷ್ಣಸ್.

ತಾರೀಖು 9ನೇ ಡಿಸಂಬರ್ 1884.

ಕಾಡಗೋಡಿ ಗವರ್ನಮೆಂಟ್ ಪ್ಲಾಂಟೇಷನಲ್ಲಿರುವ ಸುಮಾರು 2,500 ಬೂಗಿದ ಕೇಸರಿಕೆ ಮರಗಳು, 1884ನೇ ಇಸವಿ ಡಿಸಂಬರ್ 18ನೇ ಮುಕ್ತಂ ಗುರುವಾರದಲ್ಲಿ ಹೊಸಕೋಟೆ ಅಮೆಲ್ದಾರ್ರ ಜೊತೇಯಾಗಿ ಫಾರೆಸ್ಟ್ಸ್ ಅಸ್ಸೆಂಟಿಸ್‌ಯವರಿಂದ ಸದರೀ ಜಾಗಾದಲ್ಲಿ ಚಡ್ಡಿದರಖಾಸ್ತುದಾರನಿಗೆ ಮಂಜೂರಾತಿಗೆ ಬಳಪಟ್ಟು ವಿಕ್ರಯಿಸಲ್ಪಡುತ್ತವೆ.

ಷರತ್ತು—ನಗದು ಹಣ.